**ಸಾಕ್ಷಿಯನ್ನು ದಿನಾಂಕ 20-08-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀಸವಾಲು- 1 ರಿಂದ 3 ನೇ ಆರೋಪಿತರ ಪರ ಶ್ರೀ ಪಿ.ಕೆ.ಎಂ ವಕೀಲರಿಂದಃ</u>**

31. ದಿಃ 28-09-2022 ರಂದು ಪ್ರಾಸಾ-20 ರವರು ಪ್ರಾಸಾ-1 ರವರ ಹೇಳಿಕೆಯನ್ನು ಪಡೆದು ತಂದು ನನ್ನ ಮುಂದೆ ಹಾಜರು ಪಡಿಸುವ ಮುಂಚೆ ನನಗೆ ಈ ಪ್ರಕರಣದ ಬಗ್ಗೆ ನನಗೆ ಸಿಬ್ಬಂಧಿಯಿಂದ ಮಾಹಿತಿ ಇತ್ತು. ಸಿದ್ದಾಪುರ ಪೊಲೀಸ್ ಠಾಣೆಯಿಂದ 500 ಮೀಟರ್ ದೂರದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಇರುತ್ತದೆ ಎಂದರೆ ಸರಿ.

32. ದಿಃ 28-09-2022 ರಂದು ಬೆಳಗ್ಗೆ 9.30 ಗಂಟೆಗೆ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಿಂದ ಠಾಣೆಗೆ MLC intimation ಬಂದಿತ್ತು. ಸಾಕ್ಷಿ ಪುನಃ ಸದರಿ ದಿನ ಬೆಳಗ್ಗೆ 10.15 ಗಂಟೆಗೆ MLC intimation ಬಂದಿತ್ತು ಎನ್ನುತ್ತಾರೆ. ಸದರಿ MLC intimation ಬಂದ ವಿಷಯವನ್ನು ನನಗೆ ತಿಳಿಸಲಾಗಿತ್ತು. ನಿಪಿ-28 ರ ಕಾಲಂ 3(ಬಿ) ರಡಿ ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ಸಮಯ ದಿಃ 28-09-2022 ರ ಮಧ್ಯಾಹ್ನ 2.00 ಗಂಟೆ ಎಂದು ಕಾಣಿಸಲಾಗಿರುತ್ತದೆ. ದಿಃ 28-09-2022 ರಂದು ಘಟನೆಯ ಬಗ್ಗೆ ಮಧ್ಯಾಹ್ನ 2.00 ಗಂಟೆಗೆ ಮಾಹಿತಿ ಬಂದಿರುತ್ತದೆ ಎಂದು ನಿಪಿ-28 ರಲ್ಲಿ ಕಾಣಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-1 ದೂರು ಮತ್ತು ನಿಪಿ-28 ಪ್ರಥಮ ವರ್ತಮಾನ ವರದಿಯಲ್ಲಿ ಘಟನೆ ದಿಃ 28-09-2022 ರ ಬೆಳಗ್ಗೆ 9.00 ಗಂಟೆಗೆ ನಡೆದಿತ್ತು ಎಂದು ನಮೂದು ಮಾಡಲಾಗಿರುತ್ತದೆ. ನಿಪಿ-22 ರಲ್ಲಿ ಪ್ರಾಸಾ-1 ರವರಿಗೆ ದಿಃ 28-09-2022 ರಂದು ಬೆಳಗ್ಗೆ 9.00 ಗಂಟೆಗೆ ಚಿಕಿತ್ಸೆ ನೀಡಲು ಪ್ರಾರಂಭಿಸಲಾಗಿತ್ತು ಎಂದು ನಮೂದು ಇರುತ್ತದೆ ಎಂದರೆ ಸರಿ.

33. ಸಿದ್ದಾಪುರ ಆರೋಗ್ಯ ಸಮುದಾಯ ಕೇಂದ್ರದಿಂದ ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಅಂದಾಜು 8 ಕಿ.ಲೋ ಮೀಟರ್ ದೂರ ಇರುತ್ತದೆ. ಘಟನೆ ನಡೆಯಿತು ಎನ್ನಲಾದ ಸ್ಥಳದಿಂದ ಸಿದ್ದಾಪುರ ಆರೋಗ್ಯ ಕೇಂದ್ರಕ್ಕೆ ವಾಹನದಲ್ಲಿ ಹೋಗಲು 10 ರಿಂದ 15 ನಿಮಿಷ ಸಮಯ ಬೇಕಾಗುತ್ತದೆ. ನಿಪಿ-1 ರ ಷರಾದಲ್ಲಿ ದಿನಾಂಕವನ್ನು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-28 ನ್ನು ದಿನಾಂಕ 28-09-2022 ರಂದು ಮಧ್ಯಾಹ್ನ 2.30 ಗಂಟೆಗೆ ಸಿಬ್ಬಂಧಿ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿಕೊಡಲಾಗಿತ್ತು. ಸಿದ್ದಾಪುರ ಪೊಲೀಸ್ ಠಾಣೆಯಿಂದ ನಿಪಿ-28 ನ್ನು ಸ್ವೀಕರಿಸಿದ ನ್ಯಾಯಾಧೀಶರ ನ್ಯಾಯಾಲಯಕ್ಕೆ 25 ಕಿ. ಲೋ ಮೀಟರ್ ದೂರ ಇರುತ್ತದೆ. ನಿಪಿ-28 ರಲ್ಲಿ ನ್ಯಾಯಾಧೀಶರು ಅದನ್ನು ದಿಃ 29-09-2022 ರಂದು ಬೆಳಗ್ಗೆ 10.50 ಗಂಟೆಗೆ ಸ್ವೀಕರಿಸಿದ್ದಾಗಿ ಷರಾ ಬರೆದಿರುತ್ತಾರೆ ಎಂದರೆ ಸರಿ. ನಿಪಿ-28 ರ ಕಾಲಂ ನಂಬರ್ 14 ರಲ್ಲಿ ನಿಪಿ-28 ನ್ನು ನ್ಯಾಯಾಲಯಕ್ಲೆ ತೆಗೆದುಕೊಂಡು ಹೋದ ಸಿಬ್ಬಂಧಿಯ ಹೆಸರು ಬಸವರಾಜು 3 ಪಿ.ಸಿ -298 ಎಂದು ನಮೂದು ಇದ್ದು, ನ್ಯಾಯಾಧೀಶರ ಷರಾದಲ್ಲಿ ಪಿ.ಸಿ-441 ರವರು ನಿಪಿ-28 ನ್ನು ನ್ಯಾಯಾಧೀಶರಿಗೆ ತಲುಪಿಸಿದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಪ್ರಾಸಾ-1 ಸಿದ್ದಾಪುರ ಪೊಲೀಸ್ ಠಾಣೆಯ ರೌಡಿ ಶೀಟರ್ ಆಗಿದ್ದರು ಎಂದರೆ ಸಾಕ್ಷಿ ನಾನು ಕರ್ತವ್ಯದಲ್ಲಿ ಇರುವವರೆಗೆ ಆಗಿರಲಿಲ್ಲ ಎನ್ನುತ್ತಾರೆ.

34. ನ್ಯಾಯಾಧೀಶರಿಗೆ ಪ್ರಥಮ ವರ್ತಮಾನ ವರದಿ ತಲುಪುವ ಮುಂಚೆಯೇ ಅಂದರೆ ದಿಃ 28-09-2022 ರ ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ನಿಪಿ-2 ನ್ನು ಬರೆಯಲಾಗಿತ್ತು ಎಂದು ನಿಪಿ-2 ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನಿಪಿ-28 ರಲ್ಲಿ ನಮೂದಿಸಿದಂತೆ ದಿಃ 28-09-2022 ರಂದು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ನ್ನು ಠಾಣೆಯಲ್ಲಿ ಬೇಕಾದ ರೀತಿಯಲ್ಲಿ ಸೃಷ್ಟಿಸಿಕೊಂಡು ದಿಃ 29-09-

2022 ರಂದು ಬೆಳಗ್ಗೆ ನಿಪಿ-28 ನ್ನು ದಾಖಲು ಮಾಡಿ ನಂತರ ನ್ಯಾಯಾಧೀಶರಿಗೆ ನಿಪಿ-28 ನ್ನು ಕಳುಹಿಸಲಾಗಿತ್ತು ಎಂದರೆ ಸರಿಯಲ್ಲ. ನಿಪಿ-1 ನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಪಡೆದುಕೊಳ್ಳಲಾಯಿತು ಎಂಬ ಬಗ್ಗೆ ಅದರಲ್ಲಿ ವೈದ್ಯಾಧಿಕಾರಿಗಳ ಸಹಿ ಇಲ್ಲ ಎಂದರೆ ಸರಿ. MSD ಹೊಟೇಲ್ ಸದರಿ ಕಟ್ಟಡಕ್ಕೆ ಒಬ್ಬ ವ್ಯಕ್ತಿ ಮುಖ ಮಾಡಿ ನಿಂತಾಗ ಸದರಿ ಕಟ್ಟಡದ ಬಲ ಕೊನೆಯಲ್ಲಿ ಇರುವಂತೆ ನಿಪಿ-2 ರ ನಕ್ಷೆಯಲ್ಲಿ ಚಿತ್ರಿಸಲಾಗಿದೆ ಎಂದರೆ ಸರಿಯಲ್ಲ. MSD ಹೊಟೇಲ್ ಸದರಿ ಕಟ್ಟಡಕ್ಕೆ ಒಬ್ಬ ವ್ಯಕ್ತಿ ಮುಖ ಮಾಡಿ ನಿಂತಾಗ ಸದರಿ ಕಟ್ಟಡದ ಬಲ ಕೊನೆಯಲ್ಲಿ ಇರುವಂತೆ ನಿಪಿ-2 ರ ನಕ್ಷೆಯಲ್ಲಿ ಚಿತ್ರಿಸಲಾಗಿದೆ ಎಂದರೆ ಸರಿಯಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರ ನಕ್ಷೆಯ ಪ್ರಕಾರ MSD ಹೊಟೇಲ್ ನ ಹಿಂಭಾಗದಲ್ಲಿ ಮರಗೋಡು-ಸಿದ್ದಾಪುರ ಮುಖ್ಯ ರಸ್ತೆ ಮತ್ತು ಜೀಪನ್ನು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-2 ರ ನಕ್ಷೆಯ ಪ್ರಕಾರ MSD ಹೊಟೇಲ್ ನ ಹಿಂಭಾಗದಲ್ಲಿ ಮರಗೋಡು-ಸಿದ್ದಾಪುರ ಮುಖ್ಯ ರಸ್ತೆ ಮತ್ತು ಜೀಪನ್ನು ಕಾಣಿಸಲಾಗಿದೆ ಎಂದರೆ ಸರಿಯಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಠಾಣೆಯಲ್ಲಿ ಸಹಿ ಮಾಡಿ ಅದಕ್ಕೆ ಸಹಿಗಳನ್ನು ಠಾಣೆಯಲ್ಲಿ ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಮು.ಮಾ-7 ರಿಂದ 9 ನ್ನು ನಾನು MSD ಹೊಟೇಲ್ ಬಳಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ-7 ರಿಂದ 9 ನ್ನು ಈ ಪ್ರಕರಣಕ್ಕೆ ಬೇಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-3 ರ 1 ನೇ ಫೋಟೋದಲ್ಲಿ ಮತ್ತು ನಿಪಿ-3 ರ 3 ನೇ ಫೋಟೋದಲ್ಲಿ ಕಾಣುವ ನೆರಳಿನ ಪ್ರಕಾರ ಸದರಿ ಫೋಟೋಗಳನ್ನು ಮಧ್ಯಾಹ್ನ 12.30 ಗಂಟೆಯಿಂದ 1.00 ಗಂಟೆಯ ಸಮಯದಲ್ಲಿ ತೆಗೆದಂತೆ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿಪಿ-3 ರ ಫೋಟೋದಲ್ಲಿ ಮು.ಮಾ-7 ರಿಂದ 9 ಕಂಡು ಬರುವುದಿಲ್ಲ ಎಂದರೆ ಸರಿ.

**ಈಗ ಮಧ್ಯಾಹ್ನ ವಿಶ್ರಾಂತ ಸಮಯ ಆದಕಾರಣ ಸಾಕ್ಷಿಯ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ

**<u>ಸಾಕ್ಷಿಯನ್ನು ಪುನಃ ಮಧ್ಯಾಹ್ನ 3:00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲು- 1 ರಿಂದ 3 ನೇ ಆರೋಪಿತರ ಪರ ಶ್ರೀ ಪಿ.ಕೆ.ಎಂ ವಕೀಲರಿಂದಃ</u>**

35. ಕೃತ್ಯ ನಡೆಯಿತು ಎನ್ನಲಾದ ಹೊಟೇಲ್ ನ ಒಳಭಾಗ ಮತ್ತು ಹೊಟೇಲ್ ನ ಹಿಂಭಾಗಿಲಿನ ತನಕದ ನೆಲದಲ್ಲಿ ಯಾವುದೇ ರಕ್ತದ ಕಲೆಗಳು ಇದ್ದ ಬಗ್ಗೆ ನಿಪಿ-2 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಪಿ-2 ರಲ್ಲಿ ರಕ್ತದ ಕಲೆಗಳು ಹೊಟೇಲ್ ನ ಒಳಭಾಗದಲ್ಲಿ ಕಂಡು ಬಂದಿರುವುದಿಲ್ಲ ಎಂದು ನಮೂದು ಮಾಡಿರುತ್ತೇನೆ ಸರಿ. ನಿಪಿ-2 ನ್ನು ನಾನು ಹೇಳಿ ಬರೆಸಿದ್ದೆ. ನಿಪಿ-2 ರಲ್ಲಿ ಸದರಿ ಮಹಜರ್ ನ್ನು ನಾನು ಹೇಳಿ ಬರೆಸಿದ್ದೆ ಎಂದು ಉಲ್ಲೇಖ ಇರುತ್ತದೆ. ಪ್ರಾಸಾ-5 ಮತ್ತು ಪ್ರಾಸಾ-6 ರವರ ಸಹಿಗಳನ್ನು ನಾನು ಖಾಲಿ ಹಾಳೆಗೆ ಪಡೆದು ಆನಂತರ ಅದನ್ನು ಉಪಯೋಗಿಸಿ ನಿಪಿ-2 ನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು MSD ಹೊಟೇಲ್ ನ ಮಾಲಿಕರ ಅಥವಾ ಕೆಲಸಗಾರರ ಸಹಿಗಳನ್ನು ಪಡೆದಿರುವುದಿಲ್ಲ. ಮು.ಮಾ-9 ರಲ್ಲಿ Polyvinyl Butyral (PVB) ಲೇಯರ್ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-9 ಜೀಪಿನ ವಿಂಡ್ ಶೀಲ್ಡ್

ಗ್ಲಾಸ್ ನ ಚೂರುಗಳು ಅಲ್ಲ ಎಂದರೆ ಸರಿಯಲ್ಲ. ನಾನು ಮಹೇಂದ್ರ ಜೀಪು ಸಂಖ್ಯೆಃ KA-31-M-0210 ನ್ನು ವಶಕ್ಕೆ ಪಡೆದ ಸಮಯದಲ್ಲಿ ಅದರ ಕೀ ಯನ್ನು ನನಗೆ ಪ್ರಾಸಾ-2 ರವರು ಕೊಟ್ಟಿದ್ದರು. ಸದರಿ ಜೀಪಿನ ಕೀ ಯನ್ನು ನನಗೆ ಪ್ರಾಸಾ-2 ಕೊಟ್ಟ ಬಗ್ಗೆ ನಿಪಿ-2 ರಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. ಮು.ಮಾ-1, 2 ಹಾಗೂ 6 ಬಟ್ಟೆಗಳು ಪ್ರಾಸಾ-2 ರವರಿಗೆ ಎಲ್ಲಿ ಸಿಕ್ಕವು ಎಂದು ನಿಪಿ-5 ರಲ್ಲಿ ನಾನು ನಮೂದು ಮಾಡಿರುವುದಿಲ್ಲ. ನಾನು ಖಾಲಿ ಹಾಳೆಗೆ ಪಂಚರ ಸಹಿಯನ್ನು ಪಡೆದು ಆನಂತರ ಅದನ್ನು ಉಪಯೋಗಿಸಿ ನಿಪಿ-5 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 6 ಫೋಟೊಗಳಲ್ಲಿ ಕಂಡು ಬರುವ ವ್ಯಕ್ತಿಗಳು ಧರಿಸಿರುವ ಬಟ್ಟೆಗಳು ಒಂದೇ ಇರುತ್ತವೆ ಎಂದರೆ ಸರಿ. ನಿಪಿ-3 ಮತ್ತು 6 ನ್ನು ಪ್ರಥಮ ವರ್ತಮಾನ ವರದಿ ದಾಖಲಾಗುವ ಮುಂಚೆ ಅಂದರೆ ದಿಃ 28-09-2022 ರಂದು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ.

36. ನಿಪಿ-15 ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ರಡಿ ನೀಡಲಾದ ದೃಢೀಕರಣ ಪತ್ರ ಅಲ್ಲ ಎಂದರೆ ಸರಿಯಲ್ಲ. ದಿಃ 09-10-2022 ರಂದು ಈ ಪ್ರಕರಣದ 1 ಮತ್ತು 3 ನೇ ಆರೋಪಿಗಳನ್ನು ವಿಟ್ಲದಲ್ಲಿ ವಶಕ್ಕೆ ಪಡೆಯಲಾಗಿತ್ತು ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ಮತ್ತು 3 ನೇ ಆರೋಪಿಗಳನ್ನು ಠಾಣೆಗೆ ಬರಲು ಹೇಳಿ ಅಲ್ಲಿ ಅವರನ್ನು ದಸ್ತಗಿರಿ ಮಾಡಲಾಗಿತ್ತು ಎಂದರೆ ಸರಿಯಲ್ಲ. 1 ನೇ ಆರೋಪಿ ನಿಪಿ-29 ರಂತೆ ಮತ್ತು 3 ನೇ ಆರೋಪಿ ನಿಪಿ-30 ರಂತೆ ನನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 3 ನೇ ಆರೋಪಿಗಳಿಗೆ ಬೆದರಿಸಿ ಮತ್ತು ಒತ್ತಡ ಹೇರಿ ನಿಪಿ-29(ಬಿ) ಮತ್ತು ನಿಪಿ-30(ಬಿ) ರಂತೆ ಸಹಿಗಳನ್ನು ಪಡೆದಿದ್ದೆ ಎಂದರೆ ಸರಿಯಲ್ಲ.

37. ನಾನು ನಿಪಿ-8 ಮಹಜರ್ ಗೆ ಸಹಿ ಮಾಡಿದ ಪಂಚರುಗಳಿಗೆ ಲಿಖಿತ ನೋಟಿಸ್ಸನ್ನು ನೀಡಿದ್ದೆ. ಅರೆಕಾಡುವಿಗೆ ಹೋದ ನಂತರ ಅಲ್ಲಿ ಪ್ರಾಸಾ-7 ಮತ್ತು 8 ರವರಿಗೆ ನಾನು ಪಂಚರಾಗಿ ಸಹಕರಿಸುವಂತೆ ನೋಟಿಸ್ಸನ್ನು ನೀಡಿದ್ದೆ. ಪ್ರಾಸಾ-7 ಮತ್ತು 8 ರವರನ್ನು ನಾನು ಠಾಣೆಯಿಂದ ಕರೆದುಕೊಂಡು ಹೋಗಿದ್ದೆ. ನಿಪಿ-8 ರಂತೆ ಮಹಜರ್ ನ್ನು ಜರುಗಿಸಿ ಮು.ಮಾ-3 ರಿಂದ 5 ನ್ನು ಮು.ಮಾ-10 ರಿಂದ 13 ನ್ನು ಅರಕಾಡುವಿನಲ್ಲಿ 1 ನೇ ಆರೋಪಿ ಮನೆಯಿಂದ ವಶ ಪಡಿಸಿದ್ದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-3 ರಿಂದ 5 ಹಾಗೂ ಮು.ಮಾ-10 ರಿಂದ 13 ನ್ನು ಠಾಣೆಯಿಂದ 1 ನೇ ಆರೋಪಿಯ ಮನೆಗೆ ಹೋಗುವಾಗಲೇ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಇರಿಸಿ ಫೋಟೋ ಹಾಗೂ ವಿಡಿಯೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-9 ಫೋಟೋದಲ್ಲಿ ಕಂಡು ಬರುವ ಬಟ್ಟೆಗಳಲ್ಲಿ ಯಾವುದೇ ರಕ್ತದ ಕಲೆಗಳು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಫೋಟೋದಲ್ಲಿ ಕಂಡು ಬರುವ ಕತ್ತಿಗಳಲ್ಲಿ ಕೂಡ ಯಾವುದೇ ರಕ್ತದ ಕಲೆಗಳು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರ 1 ರಿಂದ 3 ನೇ ಫೋಟೋಗಳಲ್ಲಿ ಯಾವುದೇ ಬರವಣಿಗೆ ಆಗಿರುವುದು ಕಂಡು ಬಾರದೆ ಇದ್ದು, ಬಿಳಿ ಹಾಳೆ ಮಾತ್ರ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಖಾಲಿ ಹಾಳೆಗೆ ಪಂಚರ ಸಹಿಗಳನ್ನು ಪಡೆದು ಆನಂತರ ನಿಪಿ-8 ನ್ನು ಠಾಣೆಯಲ್ಲಿ ನನಗೆ ಬೇಕಾದ ರೀತಿಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10 ಡಿವಿಡಿಯಲ್ಲಿ ಕಂಡು ಬರುವ ದೃಶ್ಯಾವಳಿಗಳು edited ದೃಶ್ಯಾವಳಿಗಳು ಎಂದರೆ ಸರಿಯಲ್ಲ.

38. ಮು.ಮಾ-1, 2, 6 ರಿಂದ 8 ನ್ನು ಠಾಣಾ ಸಿಬ್ಬಂಧಿಯಾದ ಕೃಷ್ಣ ಮೂರ್ತಿ ಯವರ ಮೂಲಕ ಮೈಸೂರಿನ RFSL ಗೆ ಕಳುಹಿಸಿಕೊಟ್ಟ ಸಂದರ್ಭದಲ್ಲಿ ಕೃಷ್ಣ ಮೂರ್ತಿ ರವರ ಮುಖಾಂತರ RFSL ಅಧಿಕಾರಿಗಳಿಗೆ report ನ್ನು ಯಾವ ರೀತಿ

ಕೊಡಬೇಕು ಎಂದು ಕೋರಿಕೆಯನ್ನು ಕಳುಹಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

39. ನನಗೆ ಬೇಕಾದ ರೀತಿ ಪ್ರಾಸಾ-19 ರವರಿಂದ ನಿಪಿ-22, ನಿಪಿ-23 ಮತ್ತು ನಿಪಿ-24 ನ್ನು ನಾನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 5 ನ್ನು ಪ್ರಾಸಾ-19 ರವರು ಯಾವುದೇ ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-19 ನ್ನು RFSL ಅಧಿಕಾರಿಗಳು ನನಗೆ ಬೇಕಾದ ರೀತಿಯಲ್ಲಿ ಬರೆದು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ-3 ರಿಂದ 5, 10 ರಿಂದ 13 ನ್ನು ಠಾಣಾ ಸಿಬ್ಬಂಧಿಯಾದ ಪ್ರಾಸಾ-12 ರವರ ಮೂಲಕ ಮೈಸೂರಿನ RFSL ಗೆ ಕಳುಹಿಸಿಕೊಟ್ಟ ಸಂದರ್ಭದಲ್ಲಿ ಪ್ರಾಸಾ-12 ರವರ ಮುಖಾಂತರ RFSL ಅಧಿಕಾರಿಗಳಿಗೆ report ನ್ನು ಯಾವ ರೀತಿ ಕೊಡಬೇಕು ಎಂದು ಕೋರಿಕೆಯನ್ನು ಕಳುಹಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

40. ನಿಪಿ-20 ನ್ನು ಮೈಸೂರಿನ RFSL ನವರು ನನಗೆ ಬೇಕಾದ ರೀತಿಯಲ್ಲಿ ತಯಾರಿಸಿ ಕಳುಹಿಸಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮಂಗಳೂರಿನ KMC ಆಸ್ಪತ್ರೆಯಿಂದ ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರ ನಿಪಿ-17 ಮತ್ತು ನಿಪಿ-18 x-ray film ಗಳನ್ನು ಮಾತ್ರ ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

41. 2 ನೇ ಆರೋಪಿ ನನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಖಾಲಿ ಹಾಳೆಗೆ ಪಂಚರ ಸಹಿಗಳನ್ನು ಪಡೆದು ಆನಂತರ ಅದನ್ನು ಉಪಯೋಗಿಸಿ ನಿಪಿ-11 ಪಂಚನಾಮೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-13 ಸಿಡಿ ಯಲ್ಲಿರುವ ದೃಶ್ಯಾವಳಿಗಳನ್ನು edit ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-14 ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ರಡಿ ನೀಡಿದ ಪ್ರಮಾಣ ಪತ್ರ ಅಲ್ಲ ಎಂದರೆ

ಸರಿಯಲ್ಲ. ಯಾವುದೇ ಜೀಪನ್ನು ಪರಿಶೀಲಿಸದೆ ಚಾಸಾ-23 ರವರು ನನ್ನ ಕೋರಿಕೆಯ ಮೇರೆಗೆ ಈ ಪ್ರಕರಣಕ್ಕೆ ಪೂರಕವಾಗುವಂತೆ ನಿಪಿ-32 ನ್ನು ತಯಾರಿಸಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರಾಸಾ-4 ರವರು ನಿಪಿ-7 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. MSD ಹೊಟೇಲ್ ನಲ್ಲಿ ದಿಃ 28-09-2022 ರ ಮೊದಲೇ ಸಿ.ಸಿ ಕ್ಯಾಮರ ಅಳವಡಿಸಲಾಗಿದ್ದು, ಅದು ದಿಃ 28-09-2022 ರಂದು ಸರಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು ಎಂದರೆ ಸರಿಯಲ್ಲ. ಸದರಿ ಸಿ.ಸಿ ಕ್ಯಾಮರ ಇದ್ದರೂ ನಾನು ಅದರ DVR ನ್ನು ನಾನು ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ MSD ಹೊಟೇಲ್ ನಲ್ಲಿ ಸದರಿ ಸಮಯ ಸಿ.ಸಿ ಕ್ಯಾಮರ ಅಳವಡಿಸಿರಲಿಲ್ಲ ಎನ್ನುತ್ತಾರೆ. MSD ಹೊಟೇಲ್ ನಲ್ಲಿ ಸಿ.ಸಿ ಕ್ಯಾಮರ ಅಳವಡಿಸಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿ.ಸಿ ಕ್ಯಾಮರ MSD ಹೊಟೇಲ್ ನಲ್ಲಿ ಇರುವುದು ನ್ಯಾಯಾಲಯದ ಗಮನಕ್ಕೆ ಬರಬಾರದು ಎಂದು ಚಾಸಾ-5 ರವರನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 28-09-2022 ರಂದು ಆರೋಪಿಗಳು ಯಾವ ಸ್ಥಳದಲ್ಲಿ ಇದ್ದರು ಎಂಬ ಬಗ್ಗೆ ಖಾತ್ರಿ ಪಡಿಸಲು ನಾನು ಆರೋಪಿಗಳ ಮೊಬೈಲ್ ಸಿಮ್ ನಂಬರ್ ಗಳ CDR ಗಳನ್ನು ಪಡೆದಿರುವುದಿಲ್ಲ. ದಿಃ 28-09-2022 ರಂದು ಬೆಳಗ್ಗೆ 9.00 ಗಂಟೆಗೆ ಪ್ರಾಸಾ-1 ಮತ್ತು 2 ಯಾವ ಸ್ಥಳದಲ್ಲಿ ಇದ್ದರು ಎಂಬ ಬಗ್ಗೆ ಖಾತ್ರಿ ಪಡಿಸಲು ನಾನು ಪ್ರಾಸಾ-1 ಮತ್ತು 2 ರವರ ಮೊಬೈಲ್ ಸಿಮ್ ನಂಬರ್ ಗಳ CDR ಗಳನ್ನು ಪಡೆದಿರುವುದಿಲ್ಲ. ಈಗ ನನಗೆ ತೋರಿಸಿದ ನಿಡಿ-1 ರಿಂದ 5 ರಲ್ಲಿ ನಮೂದಿಸಿರುವ ಪ್ರಕರಣಗಳು ಪ್ರಾಸಾ-1 ರವರ ಮೇಲೆ ದಾಖಲಾಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಡಿ-6 ರಂತೆ ಪ್ರಾಸಾ-2 ರವರು 1 ನೇ ಆರೋಪಿ ಮತ್ತು ಇತರರ ಮೇಲೆ Election Petition ನ್ನು ಸಲ್ಲಿಸಿರುತ್ತಾರೆ

ಎಂದರೆ ಸರಿ. ಹಳೆಯ ರಾಜಕೀಯ ವೈಷಮ್ಯ ಇಟ್ಟುಕೊಂಡು ಪ್ರಾಸಾ-1 ರವರ ಮೇಲೆ ಹಲ್ಲೆ ಮಾಡಲಾಗಿತ್ತು ಎಂದು ನಿಪಿ-1 ರಲ್ಲಿ ಉಲ್ಲೇಖ ಇರುತ್ತದೆ. 1 ನೇ ಆರೋಪಿಯ ಮೇಲೆ ಪ್ರಾಸಾ-1 ರವರು ಮಾರಣಾಂತಿಕ ಹಲ್ಲೆ ಮಾಡಿದ ಬಗ್ಗೆ ಪ್ರಕರಣ ದಾಖಲಾಗಿ ಅದು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣವನ್ನು ಪ್ರಾಸಾ-1 ರಾಜಿ ಮಾಡಲು ಒತ್ತಡ ಹೇರುವ ಸಲುವಾಗಿ 1 ನೇ ಆರೋಪಿ ಮತ್ತು ಆತನ ಸಹೋದರರ ಮೇಲೆ ಪ್ರಾಸಾ-1 ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-22 ರಲ್ಲಿ ಒಟ್ಟು 17 ಗಾಯಗಳು ನಮೂದಿಸಲಾಗಿದ್ದು, ನಿಪಿ-17 ರಲ್ಲಿ 9 ಗಾಯಗಳು ಮಾತ್ರ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಆರೋಪಿಗಳು ಪ್ರಾಸಾ-1 ಮತ್ತು 2 ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದು ಕಂಡು ಬಂದರು ರಾಜಕೀಯ ಮುಖಂಡರ ಪ್ರಭಾವಕ್ಕೆ ಒಳಗಾಗಿ ನಾನು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮು.ಮಾ-1 ರಿಂದ 13 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ